ಬದಲಿ ನಿವೇಶನ ನೀಡುವ ಕೋರಿಕೆಯು ಬಾಕಿ ಇರುತ್ತದೆ. ಈ ರೀತಿ ವಸ್ತುಸ್ಥಿತಿ ಇದೆ. ಹೀಗಾಗಿ ಮಾನ್ಯ ಗೂಳಿಹಟ್ಟಿ ಡಿ. ಶೇಖರ್‌ರವರು ಏನು ಪ್ರಶ್ನೆಗಳನ್ನು ರೈಸ್ ಮಾಡಿದ್ದಾರೆ. ಅದಕ್ಕೆ ನಾನು ಹೇಳುವಂಥದ್ದು ಇವತ್ತು ಕೋರ್ಟಿನ ಆದೇಶ ಇದೆ. ಅದರ ನಂತರ ಸರ್ಕಾರ 19.05.2012 ರಿಂದ ಎಲ್ಲಾ ರೀತಿಯ ಪ್ರಕ್ರಿಯೆ ಸ್ಥಗಿತ ಇಟ್ಟಿದ್ದೇವೆ. ಮುಂದೆ ಇನ್ನೂ ಹೆಚ್ಚಿನ ರೀತಿಯ ಚರ್ಚೆ ಮಾಡಿ ಇನ್ನು ಮುಂದೆ ಯಾವ ರೀತಿ ಕ್ರಮವನ್ನು ತೆಗೆದುಕೊಳ್ಳಬೇಕು. ನೀವು ಹಲವಾರು ವಿಚಾರಗಳನ್ನು ಹೇಳಿದ್ದೀರಿ. ಅದರ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಆದಷ್ಟು ಬೇಗ ನಿರ್ಣಯ ಕೈಗೊಳ್ಳುತ್ತೇವೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್:– ಮಾನ್ಯ ಅಧ್ಯಕ್ಷರೆ, ತಾರತಮ್ಯ ಮಾಡಿದ್ದಾರೆ.

ಅಧ್ಯಕ್ಷರು: Clarificationಗೆ ಅವಕಾಶ ಇಲ್ಲ. ನಿಮ್ಮ ಇನ್ನೊಂದು ಶೂನ್ಯ ವೇಳೆ ವಿಷಯ ಇದೆ ಕೇಳಿ.

3. ವಿಷಯ: ಮೀಟರ್ ಬಡ್ಡಿ ಹಾವಳಿಯನ್ನು ತಡೆಗಟ್ಟುವ ಬಗ್ಗೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್: ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾವು ಬರದ ಮೇಲೆ ಚರ್ಚೆ ಮಾಡಿದ್ದೇವೆ. ಅದರಲ್ಲಿ ಸರ್ಕಾರ ಸಹಕಾರಿ ಬ್ಯಾಂಕುಗಳಿಗೆ ಸಾಲ ಮನ್ನಾ ಮಾಡಿ ಘೋಷನೆ ಮಾಡಿದೆ. ದಿನಾಂಕ 08.07.2012ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ 'ಬಡವರ ಜೀವಕ್ಕೆ ಅಡ್ಡಿಯಾಗುವ ಮೀಟರ್ ಬಡ್ಡಿ' ಎಂದು ಒಂದು ಶೀರ್ಷಿಕೆ ಪ್ರಕಟಣೆ ಆಗಿ, ದಾವಣಗೆರೆ, ಚಿತ್ರದುರ್ಗ ಮತ್ತು ಬೆಂಗಳೂರಿನಲ್ಲಿ ಯಾರಿಗೆ ಸಹಕಾರಿ ಸಂಘಗಳಲ್ಲಿ ಹಾಗೂ ಬ್ಯಾಂಕುಗಳಲ್ಲಿ ಸಾಲ ಕೊಡುವುದಿಲ್ಲ. ಅಂತಹ ಬಡವರಿಗೆ ಮೀಟರ್ ಬಡ್ಡಿಯಂತೆ 15ರಿಂದ 20% ಬಡ್ಡಿ ತೆಗೆದುಕೊಂಡು ಅಂತಹವರಿಗೆ ಚೆಕ್ಕುಗಳನ್ನು ತೆಗೆದುಕೊಂಡು ಕೊಡುತ್ತಾರೆ. ಅವರಿಗೆ ಅಧಿಕೃತ ಪರ್ಮಿಷನ್ ಇರುವುದಿಲ್ಲ. ಅಂತಹವರಿಗೆ ಖಾಲಿ ಪೇಪರ್ ಮೇಲೆ ಸಹಿ ಮಾಡಿಸಿಕೊಂಡು ಗೂಂಡಾಗಿರಿ ಮಾಡಿಕೊಂಡು ಅವರಿಗೆ ತೊಂದರೆ ಕೊಡುತ್ತಿದ್ದಾರೆ. ಬೆಂಗಳೂರು ಹಾಗೂ ಚಿತ್ರದುರ್ಗ ಮತ್ತು ಬಹಳಷ್ಟು ಜಿಲ್ಲೆಗಳಲ್ಲಿ ಈ ಮೈಕ್ರೋ ಫೈನಾನ್ಸ್ ಎನ್ನುವ ಕಂಪನಿಗಳು ಹುಟ್ಟುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಈ ಮೀಟರ್ ಬಡ್ಡಿ ದಂಧೆ ಜಾಸ್ತಿಯಾಗಿದೆ. ದಯಮಾಡಿ ಸರ್ಕಾರ ಇದನ್ನು ಕಂಟ್ರೋಲ್ ಮಾಡಬೇಕೆಂದು ಹೇಳಿ, ಅವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಬೇಕೆಂದು ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ವಿಶ್ವೇಶ್ವರೆ ಹೆಗಡೆ ಕಾಗೇರಿ (ಮಾನ್ಯ ಗೃಹ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಬಡವರ ಜೀವಕ್ಕೆ ಅಡ್ಡಿಯಾಗುವ ಮೀಟರ್ ಬಡ್ಡಿ ಕುರಿತಂತೆ ವಿವರವಾದ ವಿಷಯವನ್ನು ಪ್ರಸ್ತಾಪಿಸಿದ್ದಾರೆ. ಮಾನ್ಯ ಗೃಹ ಸಚಿವರಿಂದ ಇದರ ಬಗ್ಗೆ ವಿವರವಾದ ಉತ್ತರವನ್ನು ದೊರಕಿಸಿ ಕೊಡುತ್ತೇವೆ.

4. ವಿಷಯ: ವಸತಿ ಶಾಲೆ ಮುಂದುವರೆಸುವ ಕುರಿತು.

ಶ್ರೀ ಟಿ. ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಮೇಲುಕುಂಟೆ ಗ್ರಾಮ ಪಂಚಾಯಿತಿಯಲ್ಲಿ ಗೊಲ್ಲಹಳ್ಳಿ ಗ್ರಾಮದಲ್ಲಿ ಪ್ರೀ ಮೆಟ್ರಿಕ್ ಬಾಲಕರ ವಸತಿ ಶಾಲೆ ಕಾರ್ಯನಿರ್ವಹಿಸುತ್ತಿದೆ. ಆ ಸದರಿ ಶಾಲೆಯಲ್ಲಿ 48 ಜನ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರತಕ್ಕಂತಹ ಮಕ್ಕಳು ಇವತ್ತು ವ್ಯಾಸಂಗ ಮಾಡುತ್ತಿದ್ದಾರೆ. ನೋಂದಣಿ ಆಗಿದ್ದಾರೆ. 75 ಮತ್ತು 25 ರ ಅನುಪಾತ ಏನಿದೆ, ಈ ಅನುಪಾತದಲ್ಲಿ ವ್ಯತ್ಯಾಸ ಆಗಿದೆ ಎನ್ನುವ ಕಾರಣಕ್ಕೋಸ್ಕರ ಪರಿಶಿಷ್ಟ ಪಂಗಡದವರು 25% ಗಿಂತ ಕಡಿಮೆ ಇದ್ದಾರೆ ಎನ್ನುವ ಕಾರಣಕ್ಕೋಸ್ಕರ ಅದನ್ನು ಮುಚ್ಚಬೇಕೆಂದು ತೀರ್ಮಾನ ಮಾಡಿದ್ದಾರೆ. ನಿನ್ನೆ ವಸತಿ ಶಾಲೆ ಮುಚ್ಚುವುದಕ್ಕೆ ಆದೇಶ ಕೊಟ್ಟಿರುವುದರಿಂದ ಮಕ್ಕಳು ಈಗಾಗಲೇ ಊಟ ಇಲ್ಲದೆ ಕೂತಿದ್ದಾರೆ. ನೀವು ಯಾವುದೇ ಆದೇಶ ಅಥವಾ ತೀರ್ಮಾನ ಮಾಡುವುದಕ್ಕಿಂತ ಮುಂಚೆ inthe middle of the year ನಲ್ಲಿ ಮಾಡಿದರೆ ಅದು ಮಕ್ಕಳಿಗೆ ತೊಂದರೆಯಾಗುತ್ತದೆ. ಅದನ್ನು ನಂಬಿಕೊಂಡು ಹೈಸ್ಕೂಲ್ ಪಕ್ಕದಲ್ಲಿಯೇ ಇದೆ. ಹೈಸ್ಕೂಲ್ ಗೆ ಕೂಡ ಆಡ್ಮಿಷನ್ ಆಗಿ ಹೋಗಿದೆ. ಆ ಕಾರಣಕ್ಕೋಸ್ಕರ ಇದನ್ನು ಸ್ಥಗಿತಗೊಳಿಸಿ. ಮುಂದಿನ ವರ್ಷದ ಒಳಗಾಗಿ ಒಂದು ತೀರ್ಮಾನ ಮಾಡಿ. ನೀವು ಪ್ರಾರಂಭ ಮಾಡುವುದಕ್ಕೆ ಮುಂಚಿತವಾಗಿ ತೀರ್ಮಾನ ಮಾಡಬೇಕೇ ವಿನಃ ಪ್ರಾರಂಭ ಮಾಡಿ ಅರ್ಧ ವರ್ಷ ಕಳೆದ ಮೇಲೆ ತೀರ್ಮಾನ ಮಾಡುವುದು ಸರಿ ಹೋಗುವುದಿಲ್ಲ. ಆ ಪ್ರದೇಶದಲ್ಲಿ ಏನಾಗಿದೆ, ಹೆಚ್ಚು ಜನ ಪರಿಶಿಷ್ಟ ಪಂಗಡದವರು ಇಲ್ಲ. ಇತರೆ ವರ್ಗದವರು ಹೆಚ್ಚಿನ ಜನ ಇದ್ದಾರೆ. ಆ ವಸತಿ ಶಾಲೆಯನ್ನು ಮುಚ್ಚಿದರೆ ಬಹಳ ಕಷ್ಟವಾಗುತ್ತದೆ. ದಯಮಾಡಿ ಮಾನವೀಯತೆ ದೃಷ್ಟಿಯಿಂದ ಈ ವರ್ಷದವರೆಗೆ ತಳ್ಳಿ. ಈ ವರ್ಷ ಅಕಾಡೆಮಿಕ್ ಇಯರ್ ಮುಗಿಯಲಿ. ಆಗ ತದ ನಂತರ ತೀರ್ಮಾನ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ದಯಮಾಡಿ ಇದನ್ನು ಒಪ್ಪಬೇಕು.

ಶ್ರೀ ಎ. ನಾರಾಯಣಸ್ವಾಮಿ(ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ನಾನು ಉತ್ತರವನ್ನು ಕೊಟ್ಟಿದ್ದೇನೆ. ಮಾನ್ಯ ಜಯಚಂದ್ರರವರು ಹೇಳಿದ ಒಂದು ವ್ಯವಸ್ಥೆ ಬಗ್ಗೆ